## ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ

**ದಿನಾಂಕಃ-29.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ**
**ಶ್ರೀಮತಿ.ಕೆ.ಎಸ್.ಎಂ.ರವರಿಂದಃ**

ದಾವಾಸ್ವತ್ತಿನ ಸ.ನಂಃ178/1 ರಲ್ಲಿ ಒಟ್ಟು 5 ಎಕರೆ 30 ಗುಂಟೆ ಜಮೀನು ಇದ್ದು 6 ಗುಂಟೆ ಖರಾಬು ಸಹ ಇರುತ್ತದೆ ಎಂದು ನುಡಿಯುತ್ತಾರೆ. 1ನೇ ವಾದಿಯು ತುಮಕೂರಿನ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಆರ್.ಆರ್.ಟಿ.ಎ(ಜಿ)36 / 2015-16 ರಂತೆ ಪ್ರಕರಣವನ್ನು ದಾಖಲಿಸಿದ್ದು ಸದರಿ ಪ್ರಕರಣದಲ್ಲಿ ನಾನು ಹಾಜರಿದ್ದು ಸದರಿ ಪ್ರಕರಣದಲ್ಲಿ ತಡೆಯಾಜ್ಞೆ ಆದೇಶವಾಗಿತ್ತು ಎಂದರೆ ಸಾಕ್ಷಿಯು ಪ್ರಕರಣವನ್ನು ದಾಖಲಿಸಿದ್ದರು ಆದರೆ ಎ.ಸಿ.ನ್ಯಾಯಾಲಯದಲ್ಲಿ ನಮ್ಮಂತೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನಮ್ಮಂತೆ ಆಗಿರುವ ಆದೇಶದ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 1ನೇ ವಾದಿಯು ಸದರಿ ಆರ್.ಆರ್.ಟಿ ಪ್ರಕರಣವನ್ನು 2018-19 ನೇ ಸಾಲಿನಲ್ಲಿ ಹಿಂಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1ನೇ ವಾದಿಯು ಆರ್.ಆರ್.ಟಿ ಪ್ರಕರಣವನ್ನು ಹಿಂಪಡೆದುಕೊಂಡ ನಂತರ ಗುಬ್ಬಿಯ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಃ 161/2019 ರಂತೆ ದಾವೆಯನ್ನು ದಾಖಲಿಸಿದ್ದು ಸದರಿ ದಾವೆಯಲ್ಲಿ ನಾನು ಸಹ ಹಾಜರಾಗಿದ್ದು ಸದರಿ ದಾವೆಯು ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಂತರ 1 ನೇ ವಾದಿಯು ಈ ದಾವೆಯನ್ನು ಈ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಈ ದಾವೆಯಲ್ಲಿ ನಾನು ಪ್ರತಿವಾದಪತ್ರವನ್ನು ಸಲ್ಲಿಸಿರುತ್ತೇನೆ.

2. ನನ್ನ ತಾತನ ಹೆಸರು ಕೆಂಪಯ್ಯ ಆಗಿರುತ್ತದೆ. ನನ್ನ ಪ್ರತಿವಾದಪತ್ರದಲ್ಲಿ ನನ್ನ ತಾತನ ಮಕ್ಕಳು ಒಟ್ಟು 4 ಜನ ಮಕ್ಕಳು ಎಂದು ತೋರಿಸಿರುತ್ತೇನೆ ಎಂದರೆ ಸರಿ. ಆದರೆ ನಾನು ನಿ.ಡಿ.1 ರಂತೆ ನನ್ನ ತಾತನ ಕುಟುಂಬದ 4 ಜನ ಮಕ್ಕಳು ಮತ್ತು ಅವರುಗಳ ಹೆಣ್ಣು ಮಕ್ಕಳನ್ನು ತೋರಿಸಿರುತ್ತೇನೆ ಎಂದರೆ ಸರಿ. ಸದರಿ ಹೆಣ್ಣು ಮಕ್ಕಳಿಗೆ ನಮ್ಮ ಕುಟುಂಬದ ಆಸ್ತಿಗಳಲ್ಲಿ ಭಾಗ ಕೊಟ್ಟಿರುವುದಿಲ್ಲ. 1 ರಿಂದ 3 ನೇ ಪ್ರತಿವಾದಿಗಳು ಒಟ್ಟಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿ 4ನೇ ಪ್ರತಿವಾದಿ ಮಾತ್ರ ಪ್ರತ್ಯೇಕ ವಾದಪತ್ರವನ್ನು ಸಲ್ಲಿಸಿರುತ್ತಾರೆ ಏಕೆಂದರೆ 4 ನೇ ಪ್ರತಿವಾದಿಯಾದ ರಂಗಸ್ವಾಮಿಯು ನನ್ನ ಚಿಕ್ಕಪ್ಪನ ಮಗನಾಗಿರುತ್ತಾರೆ ಆದ್ದರಿಂದ ಅವರು ಪ್ರತ್ಯೇಕವಾಗಿ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ಸ.ನಂಃ 178 ರ ಪಹಣಿಗಳಾದ ನಿ.ಪಿ.2 ರಿಂದ ನಿ.ಪಿ.5 ರಲ್ಲಿ ಕಾಲಂ 9 ರಲ್ಲಿ ರಂಗ ಬಿನ್ ಗಾರ್ಡಿಯನ್ ಕೆಂಪಯ್ಯ , ಕೆಂಪಯ್ಯ ಬಿನ್ ರಂಗಣ್ಣ , ರಂಗಮೈನರ್ ಕೆಂಪಯ್ಯ ಎಂದು ನಮೂದಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.6 ರ ಹಿಸ್ಸಾ ಸರ್ವೆ ಟಿಪ್ಪಣಿಯಲ್ಲಿಯೂ ಸಹ ರಂಗ ಬಿನ್ ರಂಗ ಮೈನರ್ ಗಾರ್ಡಿಯನ್ ಕೆಂಪಯ್ಯ ಎಂದು ನಮೂದಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.9 ರಂತೆ ನನ್ನ ತಂದೆಯ ಅಣ್ಣ ತಮ್ಮಂದಿರುಗಳು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ನಮ್ಮಕುಟುಂಬದ ಆಸ್ತಿಗಳನ್ನು ನಮಗೆ ವಿಭಾಗ ಮಾಡಿಕೊಟ್ಟಿದ್ದು ಸದರಿ ವಿಭಾಗಪತ್ರವು ನಮ್ಮ ಬಳಿ ಇರುತ್ತದೆಎಂದರೆ ಸರಿ. ಸದರಿ ವಿಭಾಗದಲ್ಲಿ ದಾವಾಸ್ವತ್ತಿನ ಸ.ನಂಃ178/1 ರಲ್ಲಿ 2 ಎಕರೆ ಮಾತ್ರ ನಮ್ಮ ಕುಟುಂಬಕ್ಕೆ ಸೇರಿದ್ದು ಅದನ್ನು ನಾವು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಸ.ನಂಃ 178/1 ರಲ್ಲಿ ಬಂದಿದ್ದ 2 ಎಕರೆ ಆಸ್ತಿಯನ್ನು ಕಾಂತಯ್ಯ ಎಂಬುವವರಿಗೆ ದಿಃ 04-06-2019 ರಂದು ನಮ್ಮ ಕುಟುಂಬದವರೆಲ್ಲಾ ಸೇರಿ ನಿ.ಪಿ.14 ರಂತೆ ಮಾರಾಟ ಮಾಡಿರುತ್ತೇವೆ ಎಂದರೆ ಸಾಕ್ಷಿಯು ನನ್ನ ಹಿಸ್ಸೆಗೆ ಬಂದಿದ್ದ ಆಸ್ತಿಯನ್ನು ಮಾತ್ರ ನಾನು ಮಾರಾಟ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ವಾದಿಗಳಿಗೂ ನಮಗೂ ಯಾವುದೇ ಸಂಬಂದ ಇರುವುದಿಲ್ಲ.

3. ದಾವಾಸ್ವತ್ತಿನ ಸ.ನಂಃ 178/1 ರಲ್ಲಿರುವ 5 ಎಕರೆ 36 ಗುಂಟೆ ಪೈಕಿ ವಾದಿಯರ ತಾತ ರಂಗ ಬಿನ್ ಗಾರ್ಡಿಯನ್ ಕೆಂಪಯ್ಯರವರಿಗೆ 1 ಎಕರೆ 30 ಗುಂಟೆ ನಿ.ಡಿ.3 ರಲ್ಲಿ ನಮೂದಿಸಿರುವಂತೆ ವಿಭಜನೆಯ ಮೂಲಕ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಯು ತನ್ನ ಪ್ರತಿವಾದಪತ್ರವನ್ನು ಸಲ್ಲಿಸಿ ದಾವಾಆಸ್ತಿಯ ಸ.ನಂಃ 178/1 ರಲ್ಲಿ 1 ಎಕರೆ 30 ಗುಂಟೆ ಆಸ್ತಿಯು ನನ್ನ ತಾತನ 4 ಜನ ಮಕ್ಕಳಿಗೆ ಸೇರಬೇಕೆಂದು ಕೇಳುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 4ನೇ ಪ್ರತಿವಾದಿಯು ತನ್ನ ಪ್ರತಿವಾದಪತ್ರದಲ್ಲಿ ಸ.ನಂಃ 157/19 ರಲ್ಲಿ 12 ಗುಂಟೆ ಆಸ್ತಿಯು ದಿಃ05-05-1962 ರ ಪಂಚಾಯಿತಿ ಪಾಲು ಪಾರಿಕತ್ ನಂತೆ ನಮಗೆ ಸೇರಬೇಕು ಎಂದು ಹೇಳುತ್ತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರಿದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**